**ಕರ್ನಾಟಕ ಸರ್ಕಾರ**
**ಸಮಾಜ ಕಲ್ಯಾಣ ಇಲಾಖೆ**

ಸಂಖ್ಯೆ:ಸಕಇ/ಪಪೂತಕೇ/ಎಸ್-5/ಸಿಆರ್-58/2022-23

ಮುಖ್ಯ ಆಡಳಿತಾಧಿಕಾರಿಗಳು,
ಪರೀಕ್ಷಾ ಪೂರ್ವತರಬೇತಿಕೇಂದ್ರ,
ಡಾ|| ಬಿ.ಆರ್.ಅಂಬೇಡ್ಕರ್ ಭವನ
ವಸಂತನಗರ, ಬೆಂಗಳೂರು.
ದಿನಾಂಕ:04.08.2022.

**ಅಧಿಸೂಚನೆ**

ವಿಷಯ: 2022-23ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ/ ಹಿಂದುಳಿದ ವರ್ಗಗಳ ಕಲ್ಯಾಣ /ಅಲ್ಪ ಸಂಖ್ಯಾತ ಅಭ್ಯರ್ಥಿಗಳಿಗೆ ಯು.ಪಿ.ಎಸ್.ಸಿ ಪೂರ್ವಭಾವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮುಖ್ಯ ಪರೀಕ್ಷೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ತರಬೇತಿಗೆ ಆಯ್ಕೆ ಮಾಡುವ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸುವ ಬಗ್ಗೆ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2022-23ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗಗಳ ಕಲ್ಯಾಣ / ಅಲ್ಪ ಸಂಖ್ಯಾತ ಅಭ್ಯರ್ಥಿಗಳಿಗೆ ಯು.ಪಿ.ಎಸ್.ಸಿ ಪೂರ್ವಭಾವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮುಖ್ಯ ಪರೀಕ್ಷೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಪೂರ್ವಭಾವಿ ತರಬೇತಿಗೆ ಆಯ್ಕೆ ಮಾಡುವ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲು ಉದ್ದೇಶಿಸಲಾಗಿದೆ.

ಯು.ಪಿ.ಎಸ್.ಸಿ ಪ್ರಿಲೀಮ್ಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗಗಳ ಕಲ್ಯಾಣ / ಅಲ್ಪ ಸಂಖ್ಯಾತ ಅಭ್ಯರ್ಥಿಗಳಿಗೆ ಪೂರ್ವಭಾವಿ ತರಬೇತಿಯ ಅವಧಿ, ಶೈಕ್ಷಣಿಕ ವಿದ್ಯಾರ್ಹತೆ, ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ ವಿಳಾಸ ಮತ್ತು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದ ವಿವರಗಳು ಈ ಕೆಳಕಂಡಂತಿದೆ.

| ಕ್ರ.ಸಂ | ವಿವರ | ಷರಾ |
|---|---|---|
| 01 | ಕೋರ್ಸ್‌ನ ವಿವರ | ಯು.ಪಿ.ಎಸ್.ಸಿ ಮುಖ್ಯ ಪರೀಕ್ಷೆಗೆ ತರಬೇತಿ |
| 02 | ತರಬೇತಿ ಅವಧಿ | ಯು.ಪಿ.ಎಸ್.ಸಿ ಮುಖ್ಯ ಪರೀಕ್ಷೆ ಅಂತ್ಯದವರೆಗೆ |
| 03 | ಅರ್ಹತೆ | ಯು.ಪಿ.ಎಸ್.ಸಿ ಮುಖ್ಯ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. |
| 04 | ಅಭ್ಯರ್ಥಿಯ ಸಾಮಾನ್ಯ ಅರ್ಹತೆ | 1). ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.<br>2). ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ / ಅಲ್ಪ ಸಂಖ್ಯಾತ ವರ್ಗಕ್ಕೆ ಸೇರಿದವರಾಗಿರಬೇಕು.<br>3). ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಪಡೆದಿರಬೇಕು. |
| 05 | ವಾರ್ಷಿಕ ಆದಾಯ | ಕುಟುಂಬದ ವಾರ್ಷಿಕ ಆದಾಯ ರೂ. 8.00 ಲಕ್ಷ ಮೀರಿರಬಾರದು. |
| 06 | ಶಿಷ್ಯವೇತನ (ಮಾಸಿಕ) | 10,000/- |
| 07 | ತರಬೇತಿ ವೆಚ್ಚ | ತರಬೇತಿ ವೆಚ್ಚವನ್ನು ಸಂಬಂಧಪಟ್ಟ ತರಬೇತಿ ಸಂಸ್ಥೆಗಳಿಗೆ ತರಬೇತಿ ನಡೆಯುವ ದಿನಗಳ ಆಧಾರದ ಮೇಲೆ ಪಾವತಿಸಲಾಗುವುದು. |
| 08 | ಅರ್ಜಿ ಸಲ್ಲಿಸುವ ವಿಧಾನ | ನಿಗಧಿತ ಅರ್ಜಿ ನಮೂನೆಯನ್ನು ಇಲಾಖೆ ವೆಬ್ ಸೈಟ್ **www.sw.kar.nic.in** ನಿಂದ ಡೌನ್‌ಲೋಡ್ ಮಾಡಿಕೊಂಡು, ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ: 12.08.2022 ರ ಸಂಜೆ 5.30 ರೊಳಗೆ ಮುಖ್ಯ ಆಡಳಿತಾಧಿಕಾರಿಗಳು, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, ಡಾ. ಬಿ.ಆರ್.ಅಂಬೇಡ್ಕರ್ ಭವನ, ವಸಂತನಗರ, ಬೆಂಗಳೂರು - 560001 ಗೆ ಮುದ್ದಾಮ್ / ಅಂಚೆ ಮೂಲಕ ಅಥವಾ ಈ ಕೆಳಕಂಡ ಇ-ಮೇಲ್ ವಿಳಾಸಕ್ಕೆ ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಸ್ಕ್ಯಾನ್ ಮಾಡಿ ಸಲ್ಲಿಸತಕ್ಕದ್ದು. **swdupscmains@gmail.com** |
| 09 | ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | **12.08.2022 ಸಂಜೆ 5.30 ಗಂಟೆ** |

**ಸ್ಥಾನ ಹಂಚಿಕೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ:-**

| ಕ್ರ.ಸಂ. | ಮೀಸಲಾತಿ | ಶೇಕಡಾವಾರು | ಅರ್ಹರು | ಷರಾ |
|---|---|---|---|---|
| 1 | **ಪ್ರವರ್ಗ 1** | **15%** | ಸಕ್ಷಮ ಪ್ರಾಧಿಕಾರದಿಂದ ಪ್ರವರ್ಗ 1 ರ ಮೀಸಲಾತಿಯಡಿ ಪ್ರಮಾಣ ಪತ್ರ ಹೊಂದಿದವರು. | ನಿಗದಿತ ಸ್ಥಾನಕ್ಕೆ ಅರ್ಹ ಅಭ್ಯರ್ಥಿಗಳು ದೊರೆಯದಿದ್ದರೆ, ಇತರೆ ವರ್ಗಗಳಲ್ಲಿ ಲಭ್ಯವಿರುವ ಅಭ್ಯರ್ಥಿಗಳನ್ನು ಶೇಕಡಾವಾರು ಮೀಸಲಾತಿಯನ್ವಯ ಆಯ್ಕೆಗೆ ಅವಕಾಶ ಕಲ್ಪಿಸಲಾಗುವುದು. |
| 2 | **ಪ್ರವರ್ಗ 2 ಎ** | **53%** | ಸಕ್ಷಮ ಪ್ರಾಧಿಕಾರದಿಂದ **ಪ್ರವರ್ಗ 2 ಎ** ಮೀಸಲಾತಿಯಡಿ ಪ್ರಮಾಣ ಪತ್ರ ಹೊಂದಿದವರು. | |
| 3 | **ಪ್ರವರ್ಗ 3 ಎ** | **15%** | ಸಕ್ಷಮ ಪ್ರಾಧಿಕಾರದಿಂದ **ಪ್ರವರ್ಗ 3 ಎ** ಮೀಸಲಾತಿಯಡಿ ಪ್ರಮಾಣ ಪತ್ರ ಹೊಂದಿದವರು. | |
| 4 | **ಪ್ರವರ್ಗ 3 ಬಿ** | **17%** | ಸಕ್ಷಮ ಪ್ರಾಧಿಕಾರದಿಂದ **ಪ್ರವರ್ಗ 3 ಬಿ** ಮೀಸಲಾತಿಯಡಿ ಪ್ರಮಾಣ ಪತ್ರ ಹೊಂದಿದವರು. | |

**ಸ್ಥಾನ ಹಂಚಿಕೆ ಅಲ್ಪ ಸಂಖ್ಯಾತ ಅಭ್ಯರ್ಥಿಗಳಿಗೆ:-**

| ಕ್ರ.ಸಂ. | ಮೀಸಲಾತಿ | ಶೇಕಡಾವಾರು | ಅರ್ಹರು | ಷರಾ |
|---|---|---|---|---|
| 1 | ಮುಸ್ಲಿಂ | **82%** | ಸಕ್ಷಮ ಪ್ರಾಧಿಕಾರದಿಂದ ಮುಸ್ಲಿಂ ಮೀಸಲಾತಿಯಡಿ ಪ್ರಮಾಣ ಪತ್ರ ಹೊಂದಿದವರು. | ನಿಗದಿತ ಸ್ಥಾನಕ್ಕೆ ಅರ್ಹ ಅಭ್ಯರ್ಥಿಗಳು ದೊರೆಯದಿದ್ದರೆ, ಇತರೆ ವರ್ಗಗಳಲ್ಲಿ ಲಭ್ಯವಿರುವ ಅಭ್ಯರ್ಥಿಗಳನ್ನು ಶೇಕಡಾವಾರು ಮೀಸಲಾತಿಯನ್ವಯ ಆಯ್ಕೆಗೆ ಅವಕಾಶ ಕಲ್ಪಿಸಲಾಗುವುದು. |
| 2 | ಕ್ರಿಶ್ಚಿಯನ್ | **10%** | ಸಕ್ಷಮ ಪ್ರಾಧಿಕಾರದಿಂದ ಕ್ರಿಶ್ಚಿಯನ್ ಮೀಸಲಾತಿಯಡಿ ಪ್ರಮಾಣ ಪತ್ರ ಹೊಂದಿದವರು. | |
| 3 | ಜೈನ್ | **3%** | ಸಕ್ಷಮ ಪ್ರಾಧಿಕಾರದಿಂದ ಜೈನ್ ಮೀಸಲಾತಿಯಡಿ ಪ್ರಮಾಣ ಪತ್ರ ಹೊಂದಿದವರು. | |
| 4 | ಇತರೆ | **2%** | ಸಕ್ಷಮ ಪ್ರಾಧಿಕಾರದಿಂದ ಸಿಖ್ / ಪಾರ್ಸಿ / ಬೌದ್ಧ ಮೀಸಲಾತಿಯಡಿ ಪ್ರಮಾಣ ಪತ್ರ ಹೊಂದಿದವರು. | |